# ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ರಾಯಚೂರು

## SC 81/2023

ಚಾ.ಸಾಃ01
ಫ್ರಾ.ಸಾಃ01

| | | |
|---|---|---|
| ಸಾಕ್ಷಿಯ ಹೆಸರು | : | ಗಣೇಶನ್ |
| ತಂದೆಯ ಹೆಸರು | : | ಮಣಿ |
| ವಯಸ್ಸು | : | 60 ವರ್ಷ |
| ಉದ್ಯೋಗ | : | --- |
| ವಿಳಾಸ | : | ಚೆನ್ನೈ |
| ಸಾಕ್ಷಿಯನ್ನು ಪ್ರಮಾಣಿಕರಿಸಿದ ದಿನಾಂಕ | : | 13-11-2025 |

ಸದರಿ ಸಾಕ್ಷಿದಾರರು ತಮಿಳು ಭಾಷೆ ಮಾತ್ರ ಬಲ್ಲವರಾಗಿದ್ದು ಈ ನ್ಯಾಯಾಲಯಕ್ಕೆ ತಮೀಳು ಭಾಷೆಯ ಅರಿವು ಇಲ್ಲದ್ದರಿಂದ, ತಮಿಳು ಭಾಷೆಯನ್ನುಬಲ್ಲ ವಕೀಲರಾದ ಶ್ರೀ ಕೆ.ರವಿ ವಕೀಲರು ಸಿಂಧನೂರು ಇವರನ್ನು ಭಾಷಾಂತರಕಾರರನ್ನಾಗಿ ನೇಮಿಸಲಾಗಿದ್ದು ಅವರು ಇಂದು ನ್ಯಾಯಾಲಯದಲ್ಲಿ ಹಾಜರಿದ್ದು ತನಗೆ ತಮಿಳು ಮತ್ತು ಕನ್ನಡ ಭಾಷೆ ಸ್ಪಷ್ಟವಾಗಿ ಬರುತ್ತಿದ್ದು ಭಾಷಾಂತರ ಮಾಡುವುದಾಗಿ ಒಪ್ಪಿಕೊಂಡಿದ್ದರಿಂದ ಸಾಕ್ಷಿಯನ್ನು ವಿಚಾರಣೆ ಮಾಡಲು ಅನುಮತಿ ನೀಡಲಾಯಿತು.

### ಮುಖ್ಯ ವಿಚಾರಣೆಃ ಮಾನ್ಯ ಸರಕಾರಿ ಅಭಿಯೋಜಕರಿಂದ :

ಮೃತ ರಾಜೇಶ ನನ್ನ ಮಗ ಇರುತ್ತಾನೆ. ಚಾಸಾ 2 ನನ್ನ ಹೆಂಡತಿ ಇರುತ್ತಾರೆ. ಚಾಸಾ 3 ನನ್ನ ತಮ್ಮ ಇರುತ್ತಾನೆ. ನನಗೆ ಚಾಸಾ 4 ರಿಂದ 8 ಇವರ ಪರಿಚಯ ಇರುತ್ತಾರೆ. ಆರೋಪಿತನ ಪರಿಚಯ ಇರುತ್ತದೆ. ಮೃತ ರಾಜೇಶ್ ಈತನು ಚೆನ್ನೈಯನಲ್ಲಿ ಚಾಲಕ ವೃತ್ತಿ ಮಾಡುತ್ತಿದ್ದನು. ಸುಮಾರು 8 ವರ್ಷಗಳ ಹಿಂದೆ ಮೃತನು ಸಿಂಧನೂರಿಗೆ ಬಂದಿದ್ದನು. ನಂತರ ಆತನೂ ಚಾಸಾ 6 ಪ್ರಿನ್ಸಿ ಇವಳೊಂದಿಗೆ ಮದುವೆ ಮಾಡಿಕೊಳ್ಳುವ ಯೋಚನೆಯೊಂದಿಗೆ ಮದುವೆಯ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿದ ನಂತರ ಮದುವೆಯು ರದ್ದಾಗಿರುತ್ತದೆ.

2. ಇದಾದ ನಂತರ ಆರೋಪಿತರು ಮೃತ ರಾಜೇಶ ನನ್ನು ಫೋನ್ ಮಾಡಿ ಸಿಂಧನೂರಿನ ಆರ್.ಹೆಚ್ ನಂ.1 ಗೆ ಕರಿಯಿಸಿಕೊಂಡಿರುತ್ತಾರೆ. ಒಂದು ದಿನ ಚಾಸಾ 3 ಇವರು ನನಗೆ ಫೋನ್ ಮಾಡಿ, ನಿನ್ನ ಮಗನನ್ನು ಕೊಲೆ ಮಾಡಿ ಕಾಲುವೆಯಲ್ಲಿ ಬಿಸಾಕಿರುತ್ತಾರೆ ಎಂಬ ವಿಷಯ ತಿಳಿಸಿದನು. ತಕ್ಷಣ ನಾನು ನನ್ನ ಹೆಂಡತಿ ಮತ್ತು ಮಗಳು ಚೆನ್ನೈನಿಂದ ಸಿಂಧನೂರಿಗೆ ಬಂದು ಅಲ್ಲಿನ ಸರ್ಕಾರಿ ಆಸ್ಪತ್ರೆಗೆ ಹೋಗಿ ನನ್ನ ಮಗನ ಶವವನ್ನು

ನೋಡಲಾಗಿ ಆತನ ಕತ್ತು ಕೊಯ್ಯುದದ್ದು ಮತ್ತು ತಲೆ ಮುಂಭಾಗ ಮತ್ತು ಹಿಂಭಾಗದಲ್ಲಿ ರಕ್ತದ ಗಾಯಗಳು ಕಂಡು ಬಂದವು. ನನ್ನ ಮಗನ ಸಾವಿಗೆ ಸ್ವಾಮಿ, ಸೋಸು @ ಆರೋಗ್ಯ ಸ್ವಾಮಿ, ಪೀಟರ್, ಅರುಣ್ ದಾಸ್ ಇವರೇ ಕಾರಣ ಇರಬಹುದು ಎಂದು ಸಂದೇಹವನ್ನು ವ್ಯಕ್ತಪಡಿಸಿ ಪೊಲೀಸರಿಗೆ ದೂರು ಸಲ್ಲಿಸಿದ್ದೇನೆ. ನಾನು ಸಲ್ಲಿಸಿದ ದೂರನ್ನು ನಿ.ಪಿ 1 ಎಂದು ಅದರ ಮೇಲಿನ ನನ್ನ ಸಹಿಯನ್ನು ನಿ.ಪಿ 1(ಅ) ಎಂದು ಗುರುತಿಸುತ್ತೇನೆ.

3. ತದನಂತರ ಪೊಲೀಸರಿಗೆ ನಾನು ಘಟನೆಯ ಜಾಗ ತೋರಿಸಿದ್ದರಿಂದ ಅಲ್ಲಿ ಒಂದು ಚಾಕು ಬಿದ್ದಿತ್ತು ಅದನ್ನು ಪೊಲೀಸರು ಜಪ್ತಿ ಮಾಡಿಕೊಂಡಿದ್ದಾರೆ. ಸ್ಥಳ ಪಂಚನಾಮೆಯನ್ನು ನಿ.ಪಿ 2 ಎಂದು ಮತ್ತು ಸಾಕ್ಷಿದಾರರ ಸಹಿಯನ್ನು ನಿ.ಪಿ 2(ಅ) ಎಂದು ಗುರುತಿಸಲಾಯಿತು. ನಂತರ ಪೊಲೀಸರು ಸಿಂಧನೂರಿನ ಸರ್ಕಾರಿ ಆಸ್ಪತ್ರೆಯಲ್ಲಿ ಶವ ಪಂಚನಾಮೆ ಮಾಡಿರುತ್ತಾರೆ. ನಂತರದಲ್ಲಿ ಪೊಲೀಸರು ನನ್ನ ಮಗನ ಸಾವಿಗೆ ಕಾರಣರಾದವರನ್ನು ನನಗೆ ತೋರಿಸಿಲ್ಲ. ತದನಂತರ ಪೊಲೀಸರು ಪ್ರಕರಣದ ಬಗ್ಗೆ ನನ್ನನ್ನು ವಿಚಾರಣೆಗೆ ಒಳಪಡಿಸಿಲ್ಲ. (ನಿ.ಪಿ 1 ಮತ್ತು 2 ರ ಮೂಲ ದಾಖಲೆಗಳು SC 33/2022 ರಲ್ಲಿ ಇರುತ್ತವೆ.)

(ಈ ಹಂತದಲ್ಲಿ ಮಾನ್ಯ ಸರ್ಕಾರಿ ಅಭಿಯೋಜಕರ ಮನವಿ ಮೇರೆಗೆ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಗಿದೆ)

**<u>ಪಾಟೀ ಸವಾಲುಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ</u> :**

ದಿನಾಂಕ 22.12.2019 ರಂದು ಸಿಂಧನೂರು ಗ್ರಾಮೀಣ ಪೋಲಿಸರು ನನ್ನನ್ನು ಕರೆಯಿಸಿದ್ದರು ಅನ್ನುವುದು ನಿಜ. ಅಂದು ಪೊಲೀಸರು ತಮ್ಮ ವಶದಲ್ಲಿದ್ದ ಆರೋಪಿ ಆರೋಗ್ಯ ಸ್ವಾಮಿ @ ಸ್ವಾಮಿ ಇವನನ್ನು ನನಗೆ ತೋರಿಸಿದ್ದರು ಅನ್ನುವುದು ನಿಜ. ಮೃತನು ಪ್ರಿನ್ಸಿ ಇವಳೊಂದಿಗೆ ಪ್ರೇಮಿಸಿದ್ದಕ್ಕೆ ಬದಲಿಗೆ ಆತನನ್ನು ಕೊಲ್ಲುವ ಬಗ್ಗೆ ತಾನು ಇತರೆ ಆರೋಪಿತರೊಂದಿಗೆ ಸೇರಿ ಒಳ ಸಂಚು ಮಾಡಿ ಆತನನ್ನು ಪೋನ್ ಮಾಡಿ ಮರುಗನ್ ಗುಡಿ ಹತ್ತಿರ ಕರೆಯಿಸಿ ಆತನಿಗೆ ಸಾರಾಯಿ ಕುಡಿಸಿ ಆತನನ್ನು ಚಾಕುನಿಂದ ಹೊಡೆದು ಸಾಯಿಸಿ ಕಾಲುವೆಯಲ್ಲಿ ಬಿಸಾಕಿದ್ದ ಬಗ್ಗೆ ನನ್ನ ಮುಂದೆ ಒಪ್ಪಿಕೊಂಡಿದ್ದಾನೆಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಅನ್ನುವುದು ಸರಿ. (ಸದರಿ ಪ್ರಶ್ನೆಯು ಭಾರತೀಯ ಸಾಕ್ಷ್ಯ ಅಧಿನಿಯಮ ಕಲಂ 25 ಮತ್ತು 26 ರ ವಿರುದ್ಧವಾಗಿದೆ ಎಂದು ಆರೋಪಿ ಪರ ವಕೀಲರು ತಕಾರರು ಹೇಳಿದ್ದರಿಂದ ಅದನ್ನು ಅಂತಿಮ ಆದೇಶಕ್ಕೆ ಕಾಯ್ದಿಡಲಾಗಿದೆ.)

2. ದಿನಾಂಕ 11.03.2020 ರಂದು ಪೊಲೀಸರು ನನ್ನ ಸಮಕ್ಷಮದಲ್ಲಿ ಆರೋಪಿಯ ಮನೆ ಶೋಧನೆಯ ಬಗ್ಗೆ ನನ್ನ ಹೇಳಿಕೆ ಪಡೆದಿದ್ದಾರೆ ಅನ್ನುವುದು ನಿಜ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ :**

ನನ್ನ ಮಗನ ಹತ್ತಿರ ಯಾವ ಪೋನ್ ಇತ್ತು ನನಗೆ ಮಾಹಿತಿ ಇಲ್ಲ. ಆತನ ಮೊಬೈಲ್ ನಂಬರ್ ನನಗೆ ನೆನಪಿಲ್ಲ. ಸಿಂಧನೂರಿಗೆ ಬರುವಂತೆ ಮೃತರಿಗೆ ಆರೋಪಿತರು ಯಾವ ದಿನಾಂಕದಂದು ಕರೆ ಮಾಡಿದ್ದರು ಎಂಬುದರ ಬಗ್ಗೆ ನನಗೆ ನೆನಪಿಲ್ಲ. ಈ ಪ್ರಕರಣದ ಆರೋಪಿ ಆರೋಗ್ಯ ಸ್ವಾಮಿಯೇ ಮೃತರಿಗೆ ಪೋನ್ ಮಾಡಿ ಕರೆಯಿಸಿದ್ದನು. ಆರೋಪಿತರು ಮೃತರಿಗೆ ಪೋನ್ ಮಾಡಿ ಸಿಂಧನೂರಿಗೆ ಕರೆಯಿಸಿಕೊಂಡಿದ್ದರ ಬಗ್ಗೆ ನಾನು ಪೋಲಿಸರ ಮುಂದೆ ಹೇಳಿಲ್ಲ. ಸದರಿ ವಿಷಯವನ್ನು ನಾನು ಇದೇ ಕೊಲೆಗೆ ಸಂಬಂಧಿಸಿದ ಇನ್ನೊಂದು ಪ್ರಕರಣವಾದ SC 33/2022 ರಲ್ಲಿ ಹೇಳಿಲ್ಲ ಅನ್ನುವುದು ನಿಜ. ಆರೋಪಿತನು ಮೃತನಿಗೆ ಪೋನ್ ಮಾಡಿ ಕರೆಯಿಸಿಕೊಂಡಿದ್ದ ವಿಷಯವನ್ನು ದುರುದ್ದೇಶಪೂರ್ವಕವಾಗಿ ಹೇಳುತ್ತಿದ್ದೇನೆ ಅನ್ನುವುದು ಸುಳ್ಳು.

2. ದಿನಾಂಕ 11.12.2019 ರಂದು ಚಾಸಾ 3 ಇವರು ನನಗೆ ಪೋನ್ ಮಾಡಿ ಘಟನೆಯ ಬಗ್ಗೆ ವಿಷಯ ತಿಳಿಸಿದ್ದರು. ದಿನಾಂಕ 13.12.2019 ರಂದು ಸಾಯಂಕಾಲ 5 ಗಂಟೆಗೆ ನಾನು ಸಿಂಧನೂರಿಗೆ ಬಂದಿದ್ದೇನು. ದಿನಾಂಕ 13.12.2019 ರಂದು ನಾನು ತಕ್ಷಣದಲ್ಲಿ ದೂರು ಸಲ್ಲಿಸಿಲ್ಲ. ಇದಾದ 2 ದಿನಗಳ ನಂತರ ನಾನು ದೂರು ಸಲ್ಲಿಸಿದ್ದೇನೆ. ದೂರನ್ನು ಪೊಲೀಸರು ಠಾಣೆಯಲ್ಲಿ ಕಂಪ್ಯೂಟರ್ ನಲ್ಲಿ ತಯಾರಿಸಿರುತ್ತಾರೆ. ನಾನು ನನ್ನ ಹೇಳಿಕೆಯನ್ನು ತಮಿಳುನಲ್ಲಿ ಹೇಳಿದ್ದೇನೆ. ಠಾಣೆಯಲ್ಲಿ ತಮಿಳು ಕನ್ನಡ ಬಲ್ಲವರಿದ್ದರು ಅವರ ಸಹಾಯದಿಂದ ಕನ್ನಡದಲ್ಲಿ ದೂರನ್ನು ತಯಾರಿಸಲಾಯಿತು. ಅವರ ಹೆಸರನ್ನು ದೂರಿನಲ್ಲಿ ನಮೂದಿಸಿದ್ದರ ಬಗ್ಗೆ ನನಗೆ ಗೊತ್ತಿಲ್ಲ.

3. ಮೃತನು ಸಾಯುವ ಪೂರ್ವದಲ್ಲಿ ಕುಡಿತದ ಚಟಕ್ಕೆ ಒಳಗಾಗಿದ್ದನು ಅನ್ನುವುದು ನಿಜ. ಮೃತನು ಚೆನ್ನೈನಲ್ಲಿಯೇ ಕೆಲಸ ಮಾಡುತ್ತಿದ್ದನು ಅನ್ನುವುದು ಸುಳ್ಳು. ಸಾಕ್ಷಿಯು ಮುಂದುವರೆದು ಮದುವೆ ರದ್ದಾದ ನಂತರ ಆತನು ಚೆನ್ನೈಗೆ ಮರಳಿದನು ಎಂದು ಹೇಳುತ್ತಾನೆ. ಮೃತನು ಚೈನ್ನೈನಿಂದ ಸಿಂಧನೂರಿಗೆ ಯಾವತ್ತು ಬಂದೇ ಇಲ್ಲ ಅನ್ನುವುದು ಸುಳ್ಳು. ಪ್ರಕರಣದಲ್ಲಿ ಒಳಗೊಂಡ ಶವ ನನ್ನ ಮಗನದ್ದು ಅಲ್ಲ ಅನ್ನುವುದು ಸುಳ್ಳು.

4. ಮೃತನ ಶವವು ಪರಿಚಯ ಹಿಡಿಯುವ ಸ್ಥಿತಿಯಲ್ಲಿ ಇರಲಿಲ್ಲ ಅನ್ನುವುದು ಸುಳ್ಳು. ಸುಮಾರು 8 ವರ್ಷಗಳ ಹಿಂದೆ ಮೃತನು ಸಿಂಧನೂರಿಗೆ ಬಂದಿದ್ದನು. ನಂತರ ಆತನೂ ಚಾಸಾ 6 ಪ್ರಿನ್ಸಿ ಇವಳೊಂದಿಗೆ ಮದುವೆ ಮಾಡಿಕೊಳ್ಳುವ ಯೋಚನೆಯೊಂದಿಗೆ ಮದುವೆಯ ಆಮಂತ್ರಣ ಪತ್ರಿಕೆಗಳನ್ನು ಮುದ್ರಿಸಿದ ನಂತರ ಮದುವೆಯು ರದ್ದಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ಇದಾದ ನಂತರ ಆರೋಪಿತರು ಮೃತ ರಾಜೇಶ ನನ್ನು ಪೋನ್ ಮಾಡಿ ಸಿಂಧನೂರಿನ ಆರ್.ಹೆಚ್ ನಂ.1 ಗೆ ಕರಿಯಿಸಿಕೊಂಡು

ಕೊಲೆ ಮಾಡಿ ಕಾಲುವೆಯಲ್ಲಿ ಬಿಸಾಕಿರುತ್ತಾರೆ ಎಂಬ ವಿಷಯವನ್ನು ಚಾಸಾ 3 ಇವರು ನನಗೆ ಪೋನ್ ಮುಖಾಂತರ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ತದನಂತರ ನಾನು ಸರ್ಕಾರಿ ಆಸ್ಪತ್ರೆಗೆ ಬಂದು ಅಲ್ಲಿದ್ದ ಶವವನ್ನು ನನ್ನ ಮಗನದೆಂದು ಗುರುತಿಸಿ ನೋಡಲಾಗಿ ಆತನ ಕತ್ತು ಕೊಯ್ದ್ಯು, ತಲೆ ಮುಂಬಾಗ ಮತ್ತು ಹಿಂಬಾಗದಲ್ಲಿ ಹೊಡೆದ ಗಾಯಗಳಾಗಿದ್ದು ನೋಡಿದಿನಿ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ಮುಖ್ಯ ವಿಚಾರಣೆಯಲ್ಲಿ ಹೇಳಿದ ಜನರ ವಿರುದ್ದದ ದ್ವೇಶದಿಂದ ಅವರ ವಿರುದ್ದ ಸುಳ್ಳು ದೂರು ಸಲ್ಲಿಸಿದ್ದೇನೆ ಅನ್ನುವುದು ಸುಳ್ಳು. ಪೊಲೀಸರು ನನ್ನ ಸಮಕ್ಷಮದಲ್ಲಿ ಯಾವುದೇ ರೀತಿ ಪಂಚನಾಮೆ ಮಾಡಿಲ್ಲ ಅನ್ನುವುದು ಸುಳ್ಳು. ದಿನಾಂಕ 22.12.2019 ರಂದು ಸಿಂಧನೂರು ಗ್ರಾಮೀಣ ಪೋಲಿಸರು ನನ್ನನ್ನು ಕರೆಯಿಸಿದ್ದರು ಅನ್ನುವುದು ನಿಜ. ಅಂದು ಪೊಲೀಸರು ತಮ್ಮ ವಶದಲ್ಲಿದ್ದ ಆರೋಪಿ ಆರೋಗ್ಯ ಸ್ವಾಮಿ @ ಸ್ವಾಮಿ ಇವನನ್ನು ನನಗೆ ತೋರಿಸಿದ್ದರು ಅನ್ನುವುದು ನಿಜ. ಮೃತನು ಪ್ರಿನ್ಸಿ ಇವಳೊಂದಿಗೆ ಪ್ರೇಮಿಸಿದ್ದಕ್ಕೆ ಬದಲಿಗೆ ಆತನನ್ನು ಕೊಲ್ಲುವ ಬಗ್ಗೆ ತಾನು ಇತರೆ ಆರೋಪಿತರೊಂದಿಗೆ ಸೇರಿ ಒಳ ಸಂಚು ಮಾಡಿ ಆತನನ್ನು ಪೋನ್ ಮಾಡಿ ಮರುಗನ್ ಗುಡಿ ಹತ್ತಿರ ಕರೆಯಿಸಿ ಆತನಿಗೆ ಸಾರಾಯಿ ಕುಡಿಸಿ ಆತನನ್ನು ಚಾಕುನಿಂದ ಹೊಡೆದು ಸಾಯಿಸಿ ಕಾಲುವೆಯಲ್ಲಿ ಬಿಸಾಕಿದ್ದ ಬಗ್ಗೆ ನನ್ನ ಮುಂದೆ ಒಪ್ಪಿಕೊಂಡಿದ್ದಾನೆಂದು ನಾನು ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು. ದಿನಾಂಕ 11.03.2020 ರಂದು ಪೊಲೀಸರು ನನ್ನ ಸಮಕ್ಷಮದಲ್ಲಿ ಆರೋಪಿಯ ಮನೆ ಶೋಧನೆಯ ಬಗ್ಗೆ ನನ್ನ ಹೇಳಿಕೆ ಪಡೆದಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಅನ್ನುವುದು ಸುಳ್ಳು.

(ಭಾಷಾಂತರಕಾರರು ಭಾಷಾಂತರವನ್ನು ಸರಿಯಾದ ರೀತಿಯಲ್ಲಿ ಮಾಡಿದ್ದಾಗಿ ವಿವರಿಸಿರುತ್ತಾರೆ.)

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿ.ಇದೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ರಾಯಚೂರು.